ಸೃಜಿಸಿ ವಿದ್ಯಾರ್ಥಿಗಳಿಗೆ ಶಾಲೆಯನ್ನು ಆಕರ್ಷಣೀಯ ಕೇಂದ್ರವಾಗಿಸಲು ಈ ಒಂದು ದಿನ ಶಾಲಾ ಬ್ಯಾಗ್‌ನ ಹೊರೆ ಮತ್ತು ಮನೆಗೆಲಸದ ಹೊರೆ ಕಡಿತಗೊಳಿಸುವುದರೊಂದಿಗೆ ಮುಕ್ತ ಅವಕಾಶ ಕಲ್ಪಿಸುವುದಾಗಿದೆ. ಯಾವುದೇ ಕಾರಣಕ್ಕೂ ಇದು ಮನರಂಜನಾ ಚಟುವಟಿಕೆಯಾಗದಿರಲಿ.

# 9.ಸರ್ಕಾರಿ/ಅನುದಾನಿತ ಶಾಲೆಗಳಲ್ಲಿ ವಿದ್ಯಾರ್ಥಿಗಳ ಶಾಲಾ ಪ್ರವೇಶ ಶುಲ್ಕದ ವಿವರ

## ಪ್ರಾಥಮಿಕ ಶಾಲಾ ವಿಭಾಗ

| ಕ್ರ ಸಂ | ಶುಲ್ಕದ ವಿವರಗಳು | 1–5ನೇ ತರಗತಿ | 6,7ನೇ ತರಗತಿ |
|---|---|---|---|
| 1 | ವಿದ್ಯಾರ್ಥಿ ಕ್ರೀಡಾ ನಿಧಿ | – | 10 |
| 2 | ಶಿಕ್ಷಕ ದಿನಾಚರಣೆ ಬಾವುಟ | – | 05 |
| ಒಟ್ಟು | | 0 | 15 |

## ಪ್ರೌಢ ಶಾಲಾ ವಿಭಾಗ

| ಕ್ರ ಸಂ | ಶುಲ್ಕದ ವಿವರಗಳು | 8ನೇ ತರಗತಿ | 9 ರಿಂದ 10ನೇ ತರಗತಿ |
|---|---|---|---|
| 1 | ದಾಖಲಾತಿ ಶುಲ್ಕ | 0 | 10.00 |
| 2 | ಕ್ರೀಡಾ ಶುಲ್ಕ | 0 | 25.00 |
| 3 | ರೀಡಿಂಗ್ ಶುಲ್ಕ | 0 | 20.00 |
| 4 | ಪ್ರಯೋಗಾಲಯ ಶುಲ್ಕ | 0 | 20.00 |
| 5 | ದೃಕ್ ಶ್ರವಣ ಶುಲ್ಕ (ಎ.ವಿ.ಇ) | 0 | 10.00 |
| 6 | ಡ್ರಾಯಿಂಗ್ /ವೃತ್ತಿ ಶಿಕ್ಷಣ ಶುಲ್ಕ | 0 | 25.00 |
| 7 | ವೈದ್ಯಕೀಯ ಶುಲ್ಕ | 0 | 5.00 |
| 8 | ಶಾಲಾ ಸ್ವಚ್ಚತಾ ಶುಲ್ಕ | 0 | 15.00 |
| 9 | ವಿದ್ಯಾರ್ಥಿ ಕ್ರೀಡಾ ನಿಧಿ ಶುಲ್ಕ | 20 | 20.00 |
| 10 | ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ SWF | 15 | 15.00 |
| 11 | ಶಿಕ್ಷಕರ ಕಲ್ಯಾಣ ನಿಧಿ TWF | 15 | 15.00 |
| 12 | ಶಿಕ್ಷಕರ ದಿನಾಚರಣೆಯ ಬಾವುಟ | 10 | 10.00 |
| 13 | ಶಾಲಾಭಿವೃದ್ಧಿ ಶುಲ್ಕ | 0 | 20.00 |
| 14 | ರೆಡ್ ಕ್ರಾಸ್ ಸದಸ್ಯತ್ವ/ಚಟುವಟಿಕೆ ಶುಲ್ಕ | 10 | 10.00 |
| ಒಟ್ಟು | | 70 | 220 |

**ಶುಲ್ಕ ರಿಯಾಯಿತಿ**

1) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಎಲ್ಲಾ ವಿದ್ಯಾರ್ಥಿಗಳಿಗೆ
2) ಎಲ್ಲಾ ಹೆಣ್ಣು ಮಕ್ಕಳಿಗೆ
3) ರೂ 2 ಲಕ್ಷ ಮಿತಿಯೊಳಗೆ ಪ್ರವರ್ಗ–1 ರಡಿಯಲ್ಲಿ ಬರುವ ವಿದ್ಯಾರ್ಥಿಗಳಿಗೆ
4) ರೂ 44,500/– ಕ್ಕಿಂತ ಕಡಿಮೆ ವಾರ್ಷಿಕ ಆದಾಯ ಹೊಂದಿರುವ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ

**ವಿಶೇಷ ಸೂಚನೆ :**

1. ಸೇವಾದಳ , ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳು ಇರುವ ಶಾಲೆಗಳಲ್ಲಿ ಪ್ರತಿ ಘಟಕಕ್ಕೆ ತಲಾ 5.00 ರೂ ಸಂಗ್ರಹಿಸುವುದು.